ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 30 ನೇ ಸೆಪ್ಟೆಂಬರ್, 2020

ಬಡವರಿಗೆ ಸೂರು ಒದಗಿಸುವ ಬಗ್ಗೆ

ಶ್ರೀ ಎಸ್. ಎಲ್. ಭೋಜೇಗೌಡ(ಶಿಕ್ಷಕರ ಕ್ಷೇತ್ರ) -

1023(1216) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಪ್ರತಿಯೊಬ್ಬರಿಗೂ ಸೂರು ಎಂಬ ಕಾರ್ಯಕ್ರಮವು ಸರ್ಕಾರದ ಮಟ್ಟದಲ್ಲಿ ಜರೂರಾಗಿ ನಡೆಯುತ್ತಿದೆಯೇ;

(ಆ) ಬಡವರಿಗೆ ಸೂರು ಒದಗಿಸುವ ನಿಟ್ಟಿನಲ್ಲಿ ಸರ್ಕಾರವು ಕೈಗೆತ್ತಿಕೊಂಡಿರುವ ಕಾರ್ಯಕ್ರಮಗಳೇನು; ಹಾಗೂ ಕಾರ್ಯಕ್ರಮಗಳನ್ನು ಮುಗಿಸಲು ನಿಗಧಿಪಡಿಸಿರುವ ಕಾಲಮಿತಿ ಎಷ್ಟು;

(ಇ) ಇದುವರೆವಿಗೂ ರಾಜ್ಯದಲ್ಲಿ ಗುರುತಿಸಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; ವಸತಿ ಹಂಚಿಕೆ ಮಾಡಿರುವವರ ಒಟ್ಟು ಸಂಖ್ಯೆ ಎಷ್ಟು;

(ಈ) ವಸತಿ ಇಲಾಖೆಯಡಿ ಹಂಚಿಕೆ ಮಾಡಿಕೊಡುವ ಜಾಗದಲ್ಲಿ ಮೂಲಭೂತ ಸೌಕರ್ಯಗಳು ಸೂಕ್ತ ಪ್ರಮಾಣದಲ್ಲಿ ದೊರಕುತ್ತದೆಯೇ; ಹಾಗಿದ್ದಲ್ಲಿ, ರಾಜ್ಯದ ಆಯಾ ಭಾಗದಲ್ಲಿ ಗುರುತಿಸಿರುವ ಜಾಗಗಳೆಷ್ಟು; ಮತ್ತು ಎಲ್ಲೆಲ್ಲಿ? (ಜಿಲ್ಲಾವಾರು ವಿವರ ನೀಡುವುದು)